ದಿನಾಂಕಃ 14.06.2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆಎಸ್‌ಡಿ ವಕೀಲರಿಂದಃ

ಮನೆ ಬಿಟ್ಟು ಕೊಡಬೇಕೆಂದು ಈ ದಾವೆ ಸಲ್ಲಿಸಿದ್ದೇನೆ. ದಾವಾ ಆಸ್ತಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ನನ್ನ ತಾಯಿ-ತಂದೆ ಯಾರ ಹತ್ತಿರ ಗುತ್ತಿಗೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಶಾಂತರಾಜು ಮತ್ತು ಎ.ಎಸ್ ಪದ್ಮರಾಜ್ ಹೆಸರಲ್ಲಿ ದಾವಾ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 49/1, 1 ಎಕರೆ 10 ಗುಂಟೆ ಜಮೀನು ಗುತ್ತಿಗೆ ಮಾಡುತ್ತಿದ್ದೆವು. ಸದರಿ ಆಸ್ತಿಗಳನ್ನು ನಮಗೆ ಮಂಜೂರು ಮಾಡಿ ಎಂದು ಗೇಣಿ ಅರ್ಜಿ ನೀಡಿದ್ದೇವೆ ಎಂದರೆ ನಿಜ. ಸರ್ವೇ ನಂ.118 ಆಸ್ತಿಗಳಿಗೆ ಸಂಬಂಧಿಸಿದಂತೆ ನಾನು ಗೇಣಿ ಅರ್ಜಿ ನೀಡಿಲ್ಲ ಎಂದರೆ ಸರಿಯಲ್ಲ. ನಾವು ಗುತ್ತಿಗೆ ಮಾಡುತ್ತಿದ್ದ ಆಸ್ತಿಗಳನ್ನು ಸರ್ವೇ ನಂ.49/1, ಕಂದಾಯ ಅಧಿಕಾರಿಗಳೊಂದಿಗೆ ಷಾಮೀಲಾಗಿ ಸರ್ವೇ ನಂ. 118 ರ 38 ಗುಂಟೆಗೆ ಖಾತಾ ಮಾಡಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಓರಿಜಿನಲ್ ಆಗಿ ಮಾಡಿಸಿರುತ್ತೇವೆ ಎಂದು ಹೇಳುತ್ತಾರೆ. ಸರ್ವೇ ನಂ. 118 ಮೊದಲು ನನ್ನ ತಂದೆಯ ಹೆಸರಲ್ಲಿ ಇತ್ತು. ಸರ್ವೇ ನಂ.118 ಮೂಲತಃ ಕೃಷ್ಣಸ್ವಾಮಿಯವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಕೃಷ್ಣಸ್ವಾಮಿಯವರಿಂದ ಸಿಂಗ್ರಿಗೌಡರ ಮಗ ವೆಂಕಟೇಗೌಡ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವೆಂಕಟೇಗೌಡನಿಂದ 1ನೇ ಪ್ರತಿವಾದಿ ಗಂಡ ರಾಚೇಗೌಡ 20-4-1962 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಮಾಡಿದಾಗಿನಿಂದ ಇಂದಿನವರೆಗೂ ಮೂಲ ದಾಖಲಾತಿಗಳು ರಾಜೇಗೌಡರ ಹೆಸರಲ್ಲಿದೆ ಎಂದರೆ ಸರಿಯಲ್ಲ. 1962 ರಿಂದ ರಾಜೇಗೌಡ ಮತ್ತು ಕುಟುಂಬಸ್ಥರು ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ.118 ರಲ್ಲಿ 38 ಗುಂಟೆ

ಜಮೀನು ಮಾಳನಾಯಕನಹಳ್ಳಿ ಮತ್ತು ಮಿರ್ಲೆಗೆ ಹೋಗುವ ರಸ್ತೆಗೆ ಹೊಂದಿಕೊಂಡಂತೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಇರುವ ಜಾಗದ ಚೆಕ್ಕುಬಂಧಿ ಪೂರ್ವಕ್ಕೆ, ಪ್ರತಿವಾದಿಗಳ ಉಳಿಕೆ ಜಮೀನು, ಪಶ್ಚಿಮಕ್ಕೆ ನಾಗರಾಜುರವರ ಜಮೀನು, ಉತ್ತರಕ್ಕೆ ಸಣ್ಣಗೌಡರ ಜಮೀನು, ದಕ್ಷಿಣಕ್ಕೆ ಪದ್ಮಾರಾಜ್‌ರವರ ಜಮೀನು ಇದೆ ಎಂದರೆ ಸರಿಯಲ್ಲ. ಸರ್ವೇ ನಂ.118 ರಲ್ಲಿ 20 ಗುಂಟೆ ಜಮೀನು ಹಳೇ ಮಿರ್ಲೆ ಮತ್ತು ಚುಂಚನಕಟ್ಟೆಗೆ ಹೊಂದಿಕೊಂಡಂತಿದೆ ಎಂದರೆ ಸರಿಯಲ್ಲ. ಸರ್ವೇ ನಂ.118 ರ 34 1/2 ಗುಂಟೆ ಮತ್ತು 24 1/2ಗುಂಟೆ ಜಮೀನಿಗೆ ಪ್ರತಿವಾದಿ ಮತ್ತು ಪ್ರತಿವಾದಿ ಕುಟುಂಬದವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ.118 ರಲ್ಲಿ ಒಟ್ಟು 8 ಎಕರೆ 7 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ವೆಂಕಟೇಗೌಡರು ತಿಮ್ಮೇಗೌಡನ ಮಗ ದೊಡ್ಡಸಿಂಗ್ರೇಗೌಡರಿಗೆ 34 1/2 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗೌಡಯ್ಯನಿಗೆ 34 1/2 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಣ್ಣೇಗೌಡನಿಗೆ 34 1/2ಗುಂಟೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಿದ್ದೇಗೌಡನಿಗೆ 1 ಎಕರೆ 14 ಗುಂಟೆ ವೆಂಕಟೇಗೌಡ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಿದ್ದೇಗೌಡನ ಮಗ ಕಾಳೇಗೌಡನಿಗೆ 1 ಎಕರೆ 19 ಗುಂಟೆ ಮಾರಾಟ ಮೂಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ.18 ರಲ್ಲಿ ಮೇಲೆ ಹೇಳಿದ ಖರೀದಿದಾರರು ಸ್ವಾಧೀನ ಇರುತ್ತಾರೆ, ಉಳಿಕೆ ಯಾವುದೇ ಜಮೀನುದಾರರು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಮನೆ ಕಟ್ಟಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಖರೀದಿ ಮಾಡಿದ ಮೇಲೆ ಖಾತಾ ಅವರ ಹೆಸರಿಗೆ ಬದಲಾವಣೆಯಾಗಿರುವುದಿಲ್ಲ, ಅದನ್ನು ದುರುಪಯೋಗ ಮಾಡಿಕೊಂಡು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇ ಅಧಿಕಾರಿಗಳು ದಾವಾ ಆಸ್ತಿಯನ್ನು ಸರ್ವೇ ಮಾಡಲು ನನಗೆ ನೋಟೀಸು ನೀಡಿದ್ದರು ಎಂದರೆ ಸರಿಯಲ್ಲ. ಊರಿನ

ಗ್ರಾಮಸ್ಥರ ಸಮಕ್ಷಮ ದಾವಾ ಆಸ್ತಿಗಳನ್ನು ಸರ್ವೇ ಮಾಡಿ ಹದ್ದುಬಸ್ತ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರ್ವೇ ಮಾಡಿರುತ್ತಾರೆ ನಾನು ಸಹಿ ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ. ನಮ್ಮ ಊರಿನ ಜನರೆಲ್ಲಾ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸರ್ವೇ ರಿಪೋರ್ಟ್ ಪ್ರಕಾರ ಸರ್ವೇ ನಂ.49/1 ರಲ್ಲಿ 10 ಗುಂಟೆ ಮತ್ತು 11 ಗುಂಟೆ ಒಟ್ಟು 21 ಗುಂಟೆ ನಾನು ಸ್ವಾಧೀನದಲ್ಲಿ ಇರುತ್ತೇನೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಜಮೀನನ್ನು ಸರ್ವೇ ಮಾಡಿಸಿದಾಗ ಆಜೂ-ಬಾಜೂದಾರರಿಗೆ ನೋಟೀಸ್ ನೀಡಿರುತ್ತೇನೆ. ನೋಟೀಸ್ ಮತ್ತು ಮಹಜರ್ ಕಾಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನಮ್ಮ ಅನುಕೂಲಕ್ಕೆ ತಕ್ಕಂತೆ ಸರ್ವೇ ಮಾಡಿಸಿ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಹೆಸರಿಗೆ ಡಿಮ್ಯಾಂಡ್ ರಿಜಿಸ್ಟ್ರರ್ ಮತ್ತು ಖಾತಾ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ಆಸ್ತಿಯಲ್ಲಿ ಪ್ರತಿವಾದಿ ಮನೆ ಕಟ್ಟಿಕೊಂಡು ಸ್ವಾಧೀನ ಇರುತ್ತಾರೆ. ಅದರ ಮೇಲೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.149/1 ರಲ್ಲಿ ನನಗೆ ಕೇವಲ 28 ಗುಂಟೆ ಇದ್ದು, ಅದಕ್ಕೆ ಬದಲಾಗಿ 1 ಎಕರೆ 30 ಗುಂಟೆಗೆ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.ಒ.,

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ, ಕೆ.ಆರ್.ನಗರ.